ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು – 560 001.
Phone : 080 22343904
Fax : 080 2228 3758
e-mail :bngcce@kar.nic.in

ಸಂ: ಕಾಶಿಇ/ಮಾತಂವಿ/17/e-Proc/2012-13. ದಿನಾಂಕ:21.11.2012.

# ಸುತ್ತೋಲೆ

ವಿಷಯ: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರಡಿಯಲ್ಲಿ ಸಂಗ್ರಹಣೆಗಳನ್ನು ಸಂಗ್ರಹಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ದಿನಾಂಕ:09–10–2012ರ ಅಧಿಸೂಚನೆ ಸಂ: ಸಿಆಸುಇ 2 ಇಸಂಗ್ರ 2009.

>>>><<<

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರಡಿಯಲ್ಲಿ ರೂ.5.00 ಲಕ್ಷಗಳಿಗೆ (ಐದು ಲಕ್ಷ ರೂಪಾಯಿಗಳು) ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ಎಲ್ಲಾ ಸಂಗ್ರಹಣಾ ಸಂಸ್ಥೆಗಳು (all Procurement entities) 2012ರ ಡಿಸೆಂಬರ್ 3 ನೇ ದಿನಾಂಕದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ (e-Procurement Platform) ಮುಖಾಂತರ ತಮ್ಮ ಸಂಗ್ರಹಣೆಗಳನ್ನು ಸಂಗ್ರಹಿಸತಕ್ಕದ್ದೆಂದು ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಆದ್ದರಿಂದ ರೂ.5.00 ಲಕ್ಷಗಳಿಗೆ (ಐದು ಲಕ್ಷ ರೂಪಾಯಿಗಳು) ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ 2012ರ ಡಿಸೆಂಬರ್ 3 ನೇ ದಿನಾಂಕದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ (e-Procurement Platform) ಮುಖಾಂತರ ತಮ್ಮ ಸಂಗ್ರಹಣೆಗಳನ್ನು ಸಂಗ್ರಹಿಸತಕ್ಕದ್ದೆಂದು ಹಾಗೂ ರೂ.5.00 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಮೌಲ್ಯದ ಸಂಗ್ರಹಣೆಯ ಸಂಬಂಧದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿಯ ನಿಯಮಗಳನ್ವಯ ಸಾಮಾನ್ಯ ಟೆಂಡರ್ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಂಡಿಕೆ 4ರಂತೆ ಸಂಗ್ರಹಣೆಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ.

21/11/12

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ

1. ಇಲಾಖಾವ್ಯಾಪ್ತಿಯ ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತಕ್ರಮಕ್ಕಾಗಿ.
2. ಇಲಾಖಾವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಸೂಕ್ತಕ್ರಮಕ್ಕಾಗಿ.

ಪ್ರತಿಯನ್ನು

1. ಕೇಂದ್ರಕಛೇರಿಯ ಎಲ್ಲಾ ಅಧಿಕಾರಿಗಳಿಗೆ
2. ಕೇಂದ್ರಕಛೇರಿಯ ಎಲ್ಲಾ ವಿಭಾಗಗಳ ಮ್ಯಾನೇಜರ್/ಅಧೀಕ್ಷಕರುಗಳಿಗೆ.
3. ಕಛೇರಿ ಪ್ರತಿ.